**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮುಂಡಗೋಡ.**

ಸಿಸಿ ನಂಃ 534/2022

ಡಿ ಡಬ್ಲುಃ 02

| | |
|---|---|
| ಸಾಕ್ಷಿದಾರರ ಹೆಸರು | ಬಸವರಾಜ ಹಿರೇಮಠ |
| ತಂದೆಯ ಹೆಸರು | ರೇವಣಯ್ಯ |
| ವಯಸ್ಸು | 40 ವರ್ಷ |
| ಉದ್ಯೋಗ | ಪುರೋಹಿತ |
| ವಾಸ್ತವ್ಯ | ಬಿಂಗಾಪುರ, ಹಾನಗಲ್ ತಾಲೂಕು. |

ಸಾಕ್ಷಿಯನ್ನು ದಿನಾಂಕ **07.11.2025** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಸ್ವ- ಪ್ರಮಾಣೀಕೃತ ಹೇಳಿಕೆಃ**

ಮೃತ ಶ್ರೀ ಶಂಭುಲಿಂಗಯ್ಯ ಬಾಳಿಗಟ್ಟಿಮಠ ಇವರ ಮಗಳನ್ನು ನಾನು ಮದುವೆಯಾಗಿರುತ್ತೇನೆ. ನನ್ನ ಮಾವನವರು ಎಲ್.ಎಸ್.ಎಂ.ಪಿ ಸೊಸೈಟಿಯಲ್ಲಿ ಮ್ಯಾನೇಜರಾಗಿ ಕಾರ್ಯನಿರ್ವಹಿಸಿದ್ದರು. ನನ್ನ ಮಾವನವರು ತಮ್ಮ ವ್ಯವಹಾರದ ವಿಷಯಗಳನ್ನು ನನ್ನ ಬಳಿ ಹೇಳುತ್ತಿದ್ದರು. ಸೊಸೈಟಿಯಲ್ಲಿ ಸ್ವಲ್ಪ ಹಣಕಾಸಿನ ಸಮಸ್ಯ ಆಯಿತು. ಆದ ಕಾರಣ, ನಾನು ನನ್ನ ಮಾವ ಮತ್ತು ಹನುಮಂತಪ್ಪ ಎನ್ನುವವರು ದುಡ್ಡನ್ನು ಕೇಳಲು ಶಿರಸಿ ಕಡೆಗೆ ಹೋಗಿದ್ದೇವು. ಅಲ್ಲಿ ದುಡ್ಡು ಸಿಗಲಿಲ್ಲ.

2019 ನೇ ಸಾಲಿನಲ್ಲಿ ದೈವಜ್ಞ ಸೊಸೈಟಿಯಲ್ಲಿ ಸಾಲಕ್ಕಾಗಿ ಅರ್ಜಿ ಹಾಕಿದ್ದು, ಆದರೆ ಅರ್ಜಿ ವಜಾ ಅಯಿತು. ಆಗ ನನ್ನ ಮಾವನವರ ಅಕ್ಕನ ಮಗನಾದ ರಾಚೋಟಿ ಬಸವರಾಜ ಮಿತ್ರಿಕೋಟಿ ಇವರಿಗೆ ಸಂಬಂಧಿಸಿದ ಆಸ್ತಿಯ ಉತಾರ್ ನ್ನು ತೆಗೆದುಕೊಂಡು ಹೋಗಿದ್ದೇವು. ಹುಸೇನ ಬೇಗರವರು ನಮ್ಮ ಮಾವನವರಿಗೆ 3 ಚೆಕ್ ಗಳನ್ನು ಬಾಂಕಿಗೆ ಕೊಡುವಂತೆ ಕೊಟ್ಟಿದ್ದರು. ಸದರಿ 3 ಚೆಕ್ ಗಳನ್ನು ಸಾಲ ಮಂಜೂರಿ ಮಾಡಿಕೊಳ್ಳುವ ಸಲುವಾಗಿ ಕೊಟ್ಟಿದ್ದರು, ಆದರೆ ಸಾಲ ಮಂಜೂರಿ ಆಗಿದ್ದು ಇರುವುದಿಲ್ಲ. ಚೆಕ್ ಗಳನ್ನು ನಮ್ಮ ಮಾವ ಸೊಸೈಟಿಯಲ್ಲಿ ಇಟ್ಟುಕೊಂಡಿದ್ದರು , ನಂತರ ನಮ್ಮ ಮಾವನವರು ತೀರಿಕೊಂಡರು. ಚೆಕ್ ಗಳು ಸೊಸೈಟಿಯಲ್ಲಿಯೇ ಇದ್ದೇವು. ಆರೋಪಿ ಮತ್ತು ನನ್ನ ಮಾವನವರು ಸ್ನೇಹಿತರು. ವ್ಯವಹಾರದ ಬಗ್ಗೆ ನನಗೆ ನನ್ನ ಮಾವನವರಿಗೆ ಮತ್ತು ಆರೋಪಿಗೆ ಮಾತ್ರ ಗೊತ್ತು. ಪಿರ್ಯಾದಿಗೆ ಸಂಬಂಧಪಟ್ಟಿದ್ದು ಇರುವುದಿಲ್ಲ.

**(ಈ ಹಂತದಲ್ಲಿ ಸಮಯ ಮುಗಿದ ಕಾರಣ, ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು .)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

**ಪ್ರ ದ ನ್ಯಾದಂ ಮುಂಡಗೋಡ.**